1,02,32,133 (31–3–2004ಕ್ಕೆ ಕುಟುಂಬದ ಸಂಖ್ಯೆ ಮಾಹಿತಿ ಲಭ್ಯವಿರುವುದಿಲ್ಲ).

ಆ) ದಿನಾಂಕ 31–12–2004ರಂತೆ ಹಾಲಿ ಪಡಿತರ ಚೀಟಿ ಪಡೆದಿರುವವರ ಸಂಖ್ಯೆ

ಹಳದಿ 6338990

ಕೇಸರಿ 4270634

ಇ) ಈವರೆವಿಗೂ ವಿತರಿಸಿರುವ ಪಡಿತರ ಚೀಟಿಗಳ ಸಂಖ್ಯೆ 1,13,44,659 (ಈ ಒಟ್ಟು ಸಂಖ್ಯೆಯಲ್ಲಿ

ಹಳದಿ 6338990

ಅಂ.ಅ.ಯೋ 719700

ಎ.ಪಿ.ಎಲ್. 4270634 ಮತ್ತು

ಗೌರವಾನ್ವಿತ 15335 ಸೇರ್ಪಟ್ಟಿವೆ)

ಈ) ಡಿಸೆಂಬರ್ 2004 ರವರೆಗೆ ಪತ್ತೆ ಹಚ್ಚಿ ರದ್ದುಪಡಿಸಲಾಗಿರುವ ನಕಲಿ ಪಡಿತರ ಚೀಟಿಗಳು:

8,54,583	ಬಿಪಿಎಲ್
1,75,026	ಎಪಿಎಲ್
10,29,609	

519(28) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎ.ಪಿ.ಎಂ.ಸಿ) ಮುಖಾಂತರ ಅನುಷ್ಠಾನಗೊಳಿಸುವ ಗ್ರಾಮಾಂತರ ರಸ್ತೆ ಕಾಮಗಾರಿಗಳ ಕೆಲಸ ಹಾಗೂ ಅವುಗಳಿಗೆ ಅಗತ್ಯವಾದ ಅನುದಾನ ಸಮರ್ಪಕವಾಗಿ ಲಬಿಸುತ್ತಿದೆಯೇ;

ಆ) ಇದಕ್ಕಾಗಿ ಜಿಲ್ಲಾವಾರು ನಿಗಧಿಪಡಿಸಿರುವ ಹಣ ಎಷ್ಟು;

ಇ) ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿಗೆ ಈ ಯೋಜನೆಯಿಂದ ಅನುಷ್ಠಾನಗೊಳಿಸಿರುವ ರಸ್ತೆಗಳಾವುವು;

ಈ) ಇದಕ್ಕಾಗಿ ಮಂಜೂರಾದ ಅನುದಾನ ಎಷ್ಟು;

ಉ) ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ;

ಊ) ಈ ಸಾಲಿನಲ್ಲಿ ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು;

ಋ) ಎಷ್ಟು ರಸ್ತೆ ಕಾಮಗಾರಿಗಳಿಗಾಗಿ ಈ ಹಣ ಬಳಕೆ ಮಾಡಿಕೊಳ್ಳಲಾಗಿದೆ (ಹಾಸನ ಜಿಲ್ಲೆಯಲ್ಲಿ ತಾಲ್ಲೂಕುವಾರು ಪೂರ್ಣಗೊಂಡಿರುವ ರಸ್ತೆಗಳ ವಿವರಗಳನ್ನು ಒದಗಿಸುವುದು);

ಋಠ) ಸದರಿ ಯೋಜನೆಯಡಿ ಒಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ರಸ್ತೆ ಅನುಷ್ಠಾನಕ್ಕೆ ಎಷ್ಟು ಹಣ ನೀಡಲು ಅವಕಾಶವಿರುತ್ತದೆ; ಇದನ್ನು ಹೆಚ್ಚಿಸಲು ಯೋಜಿಸಲಾಗಿದೆಯೇ?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರದಿಂದ ಗ್ರಾಮೀಣ ರಸ್ತೆ ಕಾಮಗಾರಿಗಳಿಗಾಗಿ ಅನುದಾನ ಲಭಿಸುತ್ತಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ 1966 ರಡಿಯಮ 60ಸಿರ ಅಡಿಯಲ್ಲಿ ಹಿಂದಿನ ವರ್ಷ ಸಂಗ್ರಹವಾದ ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕದ ವರಮಾನದ ಆಧಾರದ ಮೇಲೆ ರಸ್ತೆ ಕಾಮಗಾರಿಗಳನ್ನು ನಿಯಮದ ನಿಬಂಧನೆಗೊಳಪಟ್ಟು ಕೈಗೊಳ್ಳಲು ಅವಕಾಶವಿರುತ್ತದೆ.

ಆ) ಇದಕ್ಕಾಗಿ ಜಿಲ್ಲಾವಾರು ಯಾವುದೇ ಹಣವನ್ನು ನಿಗಧಿಪಡಿಸಿರುವುದಿಲ್ಲ.

ಇ) 2004–05ನೆ ಸಾಲಿನಲ್ಲಿ ರೂ. 10.00 ಲಕ್ಷದ ಮೊತ್ತದ ಮೂರು ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ನಿಯಮ 60ಸಿ ರ ಅಡಿ ಅನುಮೋದನೆ ನೀಡಲಾಗಿದೆ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಸಮಿತಿಯ ನಿಧಿಯಿಂದ ರೂ. 10.00 ಲಕ್ಷಗಳು.

ಉ) ಕಾಮಗಾರಿ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಊ) ಪ್ರಸಕ್ತ ವರ್ಷ ರೂ. 10.00 ಲಕ್ಷ ಮೊತ್ತದಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಋ) ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ತಾಲ್ಲೂಕಿನಲ್ಲಿ ಮಾತ್ರ 2004–05ನೆ ಸಾಲಿನಲ್ಲಿ 3 ರಸ್ತೆ ಕಾಮಗಾರಿಗಳಿಗೆ ರೂ. 10.00 ಲಕ್ಷಗಳ ಹಣವನ್ನು ಬಳಕೆ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದೆ. ಹಾಸನ ಜಿಲ್ಲೆಯ ಉಳಿದ ಯಆವುದೇ ತಾಲ್ಲೂಕಿನಲ್ಲಿ 60ಸಿ ನಿಯಮದಡಿ ರಸ್ತೆ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಋಠ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ ನಿಯಮ 60ಸಿ ಅಡಿಯಲ್ಲಿ ನಿಗಧಿಪಡಿಸಿದ ಮಿತಿಯನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಅನುಬಂಧ–1

2004–05ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿಗೆ ನಿಯಮ 60(ಸಿ) ಅಡಿಯಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳ ವಿವರಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ಮೊತ್ತ	ಷರಾ
1.	ಜಾವಗಲ್ ಗ್ರಾಮದಲ್ಲಿ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಸಂಪರ್ಕ ಕಲ್ಪಿಸುವ ಚಿಕ್ಕಬಳ್ಳಾಪುರ ಮೂಡಿಗೆರೆ ರಸ್ತೆಯಿಂದ ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದವರೆಗೆ ಹೋಗುವ ರಸ್ತೆಯನ್ನು ಚರಂಡಿ ಹಾಗೂ ಡೆಕ್‌ಸ್ಲ್ಯಾಬ್‌ನೊಂದಿಗೆ ಡಾಂಬರೀಕರಣ ಮಾಡುವ ಕಾಮಗಾರಿ	ರೂ. 8.00 ಲಕ್ಷ	ಟೆಂಡರ್ ಪರಿಶೀಲನೆಯಲ್ಲಿದೆ
2.	ಕಾರೇದಹಳ್ಳಿ ಗ್ರಾಮದಲ್ಲಿ ಕೊಯ್ಯಣ್ಣನ ತೋಟದವರೆಗಿನ ರಸ್ತೆಯನ್ನು ಅಭಿವೃದ್ಧಿಪಡಿಸುವುದು	ರೂ. 1.00 ಲಕ್ಷ	ಪ್ರಗತಿಯಲ್ಲಿದೆ
3.	ಬೋರಿನ ಕೊಪ್ಪಲದಿಂದ ಗೊಲ್ಲರಹಳ್ಳಿ ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆಯಿಂದ ಅಂದರೆ ವಡ್ಡರಹಟ್ಟಿಯಿಂದ ಕೋಡಿಮಠದ ತೋಟದೊಳಗೆ ಹೋಗುವ ರೈತರ ರಸ್ತೆಯನ್ನು ಕಲ್ವರ್ಟ್‌ನೊಂದಿಗೆ ಅಭಿವೃದ್ಧಿಪಡಿಸುವುದು	ರೂ. 1.00 ಲಕ್ಷ	ಕಾರ್ಯಾದೇಶ ನೀಡಿದೆ
	ಒಟ್ಟು	**ರೂ. 10.00 ಲಕ್ಷ**	

ಅನುಬಂಧ–2

ಸಮಿತಿಯ ನಿಧಿಯಿಂದ ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/ 214/ ಎಂಆರ್‌ಇ/97, ಬೆಂಗಳೂರು ದಿನಾಂಕ 29–1–2001ರ ಪ್ರಕಾರ ಆಯ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಶುಲ್ಕ ಮತ್ತು ರೈಸೆನ್ಸ್ ಶುಲ್ಕದ ವಾರ್ಷಿಕ ವರಮಾನದ ಮೊತ್ತವನ್ನು ಆಧರಿಸಿ ನಿಯಮ 60(ಸಿ) (ತಿದ್ದುಪಡಿ) ಅಡಿಯಲ್ಲಿ ನಿಯಮದ ನಿಬಂಧನೆಗೊಳಪಟ್ಟು ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಪ್ರಸಕ್ತ ಸಾಲಿನ ಹಿಂದಿನ ವರ್ಷದ ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕದಿಂದ ಸಮಿತಿಯ ವಾರ್ಷಿಕ ಆದಾಯ	ಕೈಗೊಳ್ಳಬಹುದಾದ ಕಾಮಗಾರಿ ಗರಿಷ್ಠ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ರೂ. 1.50 ಕೋಟಿಗಿಂತ ಹೆಚ್ಚು	ರೂ. 30.00 ಲಕ್ಷ/ವಾರ್ಷಿಕ
2.	ರೂ. 1.00 ಕೋಟಿಗೆ ಮೇಲ್ಪಟ್ಟು ರೂ. 1.50 ಕೋಟಿ ವರೆಗೆ	ರೂ. 15.00 ಲಕ್ಷ/ವಾರ್ಷಿಕ
3.	ರೂ. 50.00 ಲಕ್ಷಕ್ಕೆ ಮೇಲ್ಪಟ್ಟು ರೂ. 1.00 ಕೋಟಿವರೆಗೆ	ರೂ. 10.00 ಲಕ್ಷ/ವಾರ್ಷಿಕ
4.	ರೂ. 50.00 ಲಕ್ಷ ಮತ್ತು ಅದಕ್ಕಿಂತ ಕಡಿಮೆ	ರೂ. 5.00 ಲಕ್ಷ/ವಾರ್ಷಿಕ

ಮುಂದುವರೆದು, ಮೇಲಿನ ಅಂಕಣದಲ್ಲಿ ನಮೂದಿಸಿರುವ ಮೊತ್ತದಲ್ಲಿ ನಿಯಮ 60(ಸಿ) ಅಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ನಿರ್ವಹಣೆಗಾಗಿ ಈ ಮೊತ್ತದ ಶೇ. 30 ರಷ್ಟು ವೆಚ್ಚ ಮಾಡಲು ಅವಕಾಶವಿರುತ್ತದೆ

520(35) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಆಹಾರ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಇವುಗಳಲ್ಲಿ ಎಷ್ಟು ಆಹಾರ ಪಡಿತರ ಚೀಟಿಗಳನ್ನು ಅಕ್ರಮವೆಂದು ಗುರುತಿಸಿ ರದ್ದುಪಡಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)

ಇ) ನಿಜವಾದ ಅರ್ಹ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳನ್ನು ಈ ಯೋಜನೆಯಿಂದ ಕೈಬಿಟ್ಟಿರುವ ಅಂಶ ಬೆಳಕಿಗೆ ಬಂದಿದೆಯೇ ಹಾಗೂ ಇದಕ್ಕೆ ಕಾರಣಗಳೇನು;

ಈ) ಇಂತಹ ಅರ್ಹ ಫಲಾನುಭವಿಗಳಿಗೆ ಈ ಪಡಿತರ ಚೀಟಿಗಳನ್ನು ವಿತರಿಸದಿರಲು ಕಾರಣಗಳೇನು ಹಾಗೂ ಯಾವಾಗ ಗುರುತಿಸಿ ಚೀಟಿ ವಿತರಿಸಲಾಗುವುದು;

ಉ) ಈ ಗುರುತಿಸುವಿಕೆಯ ಕಾರ್ಯಕ್ಕೆ ಯಾವುದಾದರೂ ಮಾನದಂಡಗಳನ್ನು ಹಾಕಿಕೊಳ್ಳಲಾಗಿದೆಯೇ;

ಊ) ಈ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)